ಶಿವಮೊಗ್ಗ ಜಿಲ್ಲೆಗೆ ವಿದ್ಯುತ್ ಸಾಮಗ್ರಿ ಪೂರೆಸುವ ಬಗ್ಗೆ.

1782. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಿಂದ ವಿದ್ಯುತ್ ಇಲಾಖೆಗೆ ಬೇಕಾಗಿರುವ ಸಾಮಗ್ರಿಗಳ ಬಗ್ಗೆ ಬಂದಿರುವ ಬೇಡಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಪೂರೈಸಲಾಗಿರುವುದೇ ?

ಆ) ಹಾಗಿಲ್ಲದಿದ್ದಲ್ಲಿ ಪೂರೈಸದೇ ಇರುವ ಸಾಮಗ್ರಿಗಳು ಯಾವುದು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಗೆ ಬಂದಿರುವ ಬೇಡಿಕೆ ಮತ್ತು ಅವಶ್ಯಕತೆಯನ್ನು ಅವಲಂಬಿಸಿ ಸಾಮಗ್ರಿಗಳನ್ನು ಪೂರೈಸಲಾಗಿದೆ.

ಆ) 'ಅ' ನಲ್ಲಿ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರದ ಬಸ್ ನಿಲ್ದಾಣದ ಕಾರ್ಯಪೂರ್ಣಗೊಳಿಸುವ ಬಗ್ಗೆ.

1783. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗ ನಗರದಲ್ಲಿ ಬಸ್ ನಿಲ್ದಾಣ ಕಾರ್ಯ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಈ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಆಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿಂತಿರುವುದಿಲ್ಲ. ಸಣ್ಣಪುಟ್ಟ ಕೆಲಸಗಳನ್ನು ಮಾಡಲಾಗುತ್ತಿದೆ.

ಆ) ಸುಮಾರು 4 ತಿಂಗಳ ಅವಧಿಯಲ್ಲಿ ಮುಗಿಸಲಾಗುವುದು.

ಶಿವಮೊಗ್ಗದ ಮಹಿಳಾ ಪಾಲಿಟೆಕ್ನಿಕ್‌ಗೆ ಸ್ಥಳ ನೀಡುವ ಬಗ್ಗೆ.

1784. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗದ ಮಹಿಳಾ ಪಾಲಿಟೆಕ್ನಿಕ್ ಈಗ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಸದರಿ ಸಂಸ್ಥೆಗೆ ಸರಿಯಾದ ಸ್ಥಳವನ್ನು ನೀಡಲು ಸರ್ಕಾರ ನಿರ್ಧರಿಸಿದೆಯೇ ?

ಆ) ಹಾಗಿದ್ದಲ್ಲಿ ಕಟ್ಟಡದ ಕೆಲಸ ಯಾವಾಗ ಆರಂಭವಾಗಲಿದೆ : ಹಾಗೂ ಯಾವಾಗ ಮುಕ್ತಾಯವಾಗಲಿದೆ ?